ಅ) ಪುತ್ತೂರಿನಲ್ಲಿ ವಿದ್ಯುತ್ ಡಿವಿಜನ್ ಆಫೀಸು ಆಗಬೇಕು ಎನ್ನುವ ಬೇಡಿಕೆಯ ಮಹತ್ವವು ಸರ್ಕಾರದವರಿಗೆ ತಿಳಿದಿದೆಯೆ.

ಇ) ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಸಚಿವರು).—

ಅ) ಪುತ್ತೂರಿನಲ್ಲಿ ಹಾಲಿ ಮಂಡಳಿಯ ಉಪ ವಿಭಾಗಾ ಕಛೇರಿ ಕಾರ್ಯ ನಿರ್ವಹಿಸುತ್ತಿದೆ.

ಆ) ರಾಜ್ಯದಲ್ಲಿ ವಿಭಾಗ, ಉಪವಿಭಾಗದ ಪುನರ್ ರಚನೆ ಮಾಡುವ ಯೋಜನೆ ಹೊಂದಿದ್ದು, ಅದಕ್ಕಾಗಿ ಮಾಹಿತಿ ಸಂಗ್ರಹಿಸುತ್ತಿದೆ. ಇದು ಮಂಡಳಿಯ ಆರ್ಥಿಕ ಸ್ಥಿತಿಯನ್ನವಲಂಬಿಸಿದ್ದು ಈಗ ಕನಿಷ್ಟ ಬೇಡಿಕೆ ಪೂರೈಸುವಷ್ಟು ಮಾತ್ರ ಪುನರ್ ರಚನೆ ಮಾಡಲು ನಿರ್ಧರಿಸಲಾಗಿದೆ. ಆದ್ದರಿಂದ ಹೊಸ ವಿಭಾಗಗಳ ರಚನೆಯನ್ನು ಆವುಗಳ ಆಗತ್ಯ, ಮಂಡಳಿ ಆರ್ಥಿಕ ಸ್ಥಿತಿ ಇವುಗಳನ್ನು ಗಮನಿಸಿ ಸೂಕ್ತ ಕಾಲದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.

ಇ) .ಅ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಬೆಳ್ತಂಗಡಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ

೮೮೨. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) —ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸುವ ಬಗ್ಗೆ ಸರ್ಕಾರದ ಪ್ರಸ್ತಾವನೆ ಬಂದಿದ್ದು ೯ ಎಕರೆ ಸರ್ಕಾರಿ ಭೂಮಿ ಮಂಜೂರಾಗಿರುವುದು ನಿಜವೇ.

ಆ) ಇಷ್ಟು ಸಮಯವಾದರು ಕೈಗಾರಿಕಾ ಶೆಡ್ಡುಗಳನ್ನು ಕಟ್ಟದಿರಲು ಕಾರಣವೇನು.

ಇ) ನೀರು ಹಾಗೂ ವಿದ್ಯುತ್ ಒದಗಣೆಯನ್ನು ಮಾಡದಿರಲು ಕಾರಣವೇನು.

ಈ) ಕೈಗಾರಿಕಾ ಶೆಡ್ಡುಗಳ ನಿರ್ಮಾಣ ಯಾವಾಗ ಪ್ರಾರಂಭವಾಗುತ್ತದೆ ? ಮತ್ತು ಎಷ್ಟು ಸಮಯದೊಳಗೆ ಪೂರ್ತಿಯಾಗುತ್ತದೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಹೌದು.

ಆ) ಗಡಿ ಗುರುತಿನ ವಿವರಗಳನ್ನು ೧೯೭೭ರಲ್ಲಿ ಒದಗಿಸಿರುವುದರಿಂದ ಕೈಗಾರಿಕಾ ವಸಾಹತುವಿನ ರೂಪರೇಖೆಯನ್ನು ರಚಿಸಲು ಸಾಧ್ಯವಾಗಲಿಲ್ಲ. ಅಲ್ಲದೆ ಉದ್ಯಮಿಗಳಿಂದ ಮಳಿಗೆಗಾಗಿ ಯಾವ ರೀತಿಯ ಬೇಡಿಕೆಯು ಬಂದಿರುವುದಿಲ್ಲ.

ಇ) ಈ ಸ್ಥಳದಲ್ಲಿ ಇನ್ನೂ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿಲ್ಲವಾದ್ದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ) ಸಮರ್ಪಕವಾದ ಬೇಡಿಕೆಯ ಸಮೀಕ್ಷೆಯನ್ನು ನಡೆಸಿದ ನಂತರ ಹಾಗೂ ಉದ್ಯಮಿಗಳ ಸರಿಯಾದ ಆಗತ್ಯಗಳನ್ನು ಆರಿತು ಮಳಿಗೆಗಳನ್ನು ಕಟ್ಟಲಾಗುವುದು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುದೀಕರಣ ಯೋಜನೆ

೮೭೪. ಶ್ರೀ ಬಿ. ಹೆಚ್. ಯಂಕಾನಾಯಕ (ಹರಪನಹಳ್ಳಿ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ ಮತ್ತು ೧೯೮೮–೮೯ರಲ್ಲಿ ಬಳ್ಳಾರಿ ಜಿಲ್ಲೆ ಹರಪನ ಹಳ್ಳಿ ತಾಲ್ಲೂಕಿಗೆ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಗೆ ಮಂಜೂರಾದ ಹಣವೆಷ್ಟು. ಸಾಗೂ ಈ ಪೈಕಿ ಬಿಡುಗಡೆ ಮಾಡಿದ ಹಣವೆಷ್ಟು.

ಆ) ಮೇಲ್ಕಂಡ ಎರಡು ವರ್ಷಗಳಲ್ಲಿ ಎಷ್ಟು ಹಳ್ಳಿಗಳಿಗೆ ಹಾಗೂ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ (ವಿವರಗಳನ್ನೊದಗಿಸುವುದು)

ಇ) ಇನ್ನೂ ಎಷ್ಟು ಹಳ್ಳಿಗಳಿಗೆ ವಿದ್ಯುತ್ ಪೂರೈಸಬೇಕಾಗಿದೆ. ಹಾಗೂ ಯಾವಾಗ ಪೂರೈಸ ಲಾಗುವುದು.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಮಂಡಳಿಯು ತಾಲ್ಲೂಕುಗಳಿಗೆ ಗ್ರಾಮಾಂತರ ವಿದ್ಯುತ್‌ಕರಣಕ್ಕೆ ಹಣ ಮಂಜೂರು ಮಾಡುವ ಕ್ರಮವಿಲ್ಲ. ರಾಜ್ಯಕ್ಕೆಲ್ಲಾ ಒಟ್ಟು ಹಣ ನಿಗದಿ ಮಾಡಲಾಗುತ್ತದೆ. ಪ್ರತಿ ತಾಲ್ಲೂಕಿಗೂ ಬೌತಿಕ ಗುರಿ ನಿಗದಿ ಮಾಡಲಾಗುತ್ತದೆ. ಆ ಗುರಿ ಸಾಧಿಸಲು ವಿದ್ಯುದ್ದೀಕರಣಕ್ಕೆ ಬೇಕಾಗುವ ಸಾಮಗ್ರಿ ಗಳನ್ನು ಖರೀದಿಸಿ ಸರಬರಾಜು ಮಾಡಲಾಗುತ್ತದೆ. ಆದ್ದರಿಂದ ಈ ಕಾರ್ಯಕ್ಕೆ ಪ್ರತಿ ತಾಲ್ಲೂಕಿಗೂ ಹಣ ಬಿಡುಗಡೆ ಮಾಡುವ ಕ್ರಮವಿಲ್ಲ.

ಆ)

ವರ್ಷ	ಗ್ರಾಮಗಳು	ಉಪಗ್ರಾಮಗಳು
೧೯೮೬–೮೭	೬	ಇಲ್ಲ
೧೯೮೭–೮೮	ಇಲ್ಲ	೧೪
೧೯೮೮–೮೯ (೧–೪–೮೮ ರಿಂದ ೨೪–೨–೮೯ ರವರೆಗೆ)	೨	೦

ಇ) ೧೯೮೧ರ ಜನಗಣತಿಯಂತೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಜನ ವಾಸವಿರುವ ಎಲ್ಲಾ ಕಂದಾಯ ಗ್ರಾಮಗಳೂ ವಿದ್ಯುದ್ದೀಕರಣಗೊಂಡಿವೆ.

ದಿನಾಂಕ ೩೦–೩–೧೯೮೯ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಬೈಂದೂರಿನಲ್ಲಿ ಕೆ. ಇ. ಬಿ. ಸಬ್ ಸ್ಟೇಷನ್

೮೭೯ ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೈಂದೂರಿಗೆ ಮಂಜೂರಾದ ವಿದ್ಯುತ್ ಸಬ್ ಸ್ಟೇಷನ್ನಿನ ಕೆಲಸವನ್ನೂ ಇದುವರೆಗೂ ಪ್ರಾರಂಭ ಮಾಡದಿರಲು ಕಾರಣವೇನು ?

ಆ) ವೋಲ್ಟೇಜ್ ಡ್ರಾಪ್ ಸಮಸ್ಯೆ ನಿವಾರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಬೈಂದೂರು ಸಬ್ ಸ್ಟೇಷನ್ನಿಗೆ ಸಂಬಂಧಪಟ್ಟ ಕಂದಾಪುರ–ಬೈಂದೂರು ೩೩ ಕೆ. ವಿ. ಲೈನಿನ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಸ್ಟೇಷನ್ನಿನ ಪೂರ್ವಭಾವಿ ಕೆಲವು ಕೆಲಸ ಪ್ರಗತಿಯಲ್ಲಿದೆ. ಸ್ಟೇಷನ್ ಮತ್ತು ಲೈನಿನ ಕೆಲಸವನ್ನು ೧೯೮೯–೯೦ ರಲ್ಲಿ ಮುಗಿಸುವ ಕಾರ್ಯಕ್ರಮವಿದೆ.

ಆ ಬೈಂದೂರು ಸ್ಟೇಷನ್ ಕಾರ್ಯಾರಂಭ ಮಾಡಿದ ಮೇಲೆ ವೋಲ್ಟೇಜಿನಲ್ಲಿ ಸುಧಾರಣೆ ಉಂಟಾಗುತ್ತದೆ. ಸ್ಟೇಷನ್ನಿನ ಕೆಲಸ ಆದಷ್ಟು ಜಾಗ್ರತೆ ಮಾಡಲು ಕಾರ್ಯಕ್ರಮ ಮಾಡಿಕೊಳ್ಳಲಾಗಿದೆ.

ಮಂಗಳೂರು ತಾಲ್ಲೂಕು ಗುರುಪುರವಲ್ಲಿ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪನೆ

೮೭೬ ಶ್ರೀ ಬಿ. ರಮಾನಾಥ ರೈ (ಬಂಟ್ವಾಳ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ತಾಲ್ಲೂಕು ಗುರುಪುರದ ಕೈ ಕಂಬದಲ್ಲಿ ವಿದ್ಯುತ್ ಸಬ್ ಸ್ಟೇಷನ್ ತೆರೆಯುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇದೆಯೆ ?

ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು.